ರಾಷ್ಟ್ರೀಯ ಹೆದ್ದಾರಿ ರಸ್ತೆವಾರು ಸೇತುವೆಗಳ ವಿವರ

1. ರಾಷ್ಟ್ರೀಯ ಹೆದ್ದಾರಿ 48 ರ ಕಿ.ಮೀ. 104ರಲ್ಲಿ
2. ರಾಷ್ಟ್ರೀಯ ಹೆದ್ದಾರಿ 17ರ ಮೀ. 102 ಮತ್ತು ಕಿ.ಮೀ. 198 ರಲ್ಲಿ
3. ರಾಷ್ಟ್ರೀಯ ಹೆದ್ದಾರಿ 63 ರ ಕಿ.ಮೀ. 358 ರಲ್ಲಿ

ರಾಜ್ಯ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿ ರಸ್ತೆಗಳಲ್ಲಿ ಸುಂಕ ವಸೂಲಾತಿ ಮಾಡಲಾಗುತ್ತಿಲ್ಲ.

ರಾಜ್ಯದಲ್ಲಿ ಅಕ್ರಮ ಸಕ್ರಮ ಒತ್ತುವರಿ ಪ್ರಕರಣಗಳು

803 (1526) - ಶ್ರೀ ಅಪ್ಪಚ್ಚು ರಾಜನ್ ಎಂ.ಪಿ. (ಸೋಮವಾರಪೇಟೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಅಕ್ರಮ-ಸಕ್ರಮ ಒತ್ತುವರಿ ಪ್ರಕರಣಗಳಲ್ಲಿ ಇತ್ಯರ್ಥವಾಗದೆ ಇರುವ ಜಿಲ್ಲಾವಾರು ಪ್ರಕರಣಗಳೆಷ್ಟು.

ಆ. ಅಕ್ರಮ-ಸಕ್ರಮ ಸಮಿತಿಗೆ (ಬಗರ್ ಹುಕುಂ) ಹಾಜರಾಗುವ ಸಮಿತಿ ಸದಸ್ಯರಿಗೆ ಯಾವ ನಿಯಮಗಳ ರೀತ್ಯಾ ಭತ್ಯೆ ನೀಡಲಾಗುವುದು;

ಇ. ಈಗ ದಿನ ಭತ್ಯೆ ಮತ್ತು ಪ್ರವಾಸ ಭತ್ಯೆ ಮಂಜೂರು ಮಾಡದಿರಲು ಕಾರಣಗಳೇನು.

ಈ. ವಿಳಂಬಕ್ಕೆ ಯಾರು ಹೊಣೆ, ಯಾವಾಗ ಮಂಜೂರು ಮಾಡಲಾಗುತ್ತದೆ.

ಉ. ಈ ಸಮಿತಿಗಳಿರುವ ಜಿಲ್ಲಾವಾರು ಸದಸ್ಯರ ಸಂಖ್ಯೆ ಎಷ್ಟು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ. ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ:2:ಸನಿತಿ:99 ದಿನಾಂಕ 22-4-1999ರ ಆದೇಶಾನುಸಾರ ಅಧಿಕಾರೇತರ ಸದಸ್ಯರಿಗೆ ಭತ್ಯೆ ನೀಡಲಾಗುತ್ತದೆ.

ಇ. ಸರ್ಕಾರಿ ಆದೇಶ ಸಂಖ್ಯೆ:ಆರ್‌ಡಿ: 07: ಎಲ್‌ಜಿಪಿ: 2001 ದಿನಾಂಕ 15-7-2002ರ ಆದೇಶದಲ್ಲಿ ರೂ. 10 ಲಕ್ಷ ಹಣ ಮಂಜೂರು ಮಾಡಿ ಆದೇಶ ಹೊರಡಿಸಲಾಗಿದೆ.

ಈ. - ಉದ್ಭವಿಸುವುದಿಲ್ಲ.-

ಉ. ಜಿಲ್ಲಾವಾರು ಸಂಖ್ಯೆ ವಿವರಗಳನ್ನು ಅನುಬಂಧ-ದಲ್ಲಿ ನೀಡಿದೆ.

Sl. No.	Name of the District	Applications Nos.	Pending Extent (in acres)	No. of committees	No. of Members
1	Bangalore	20042	33501	3	12
2	Bangalore-R	62248	139086	8	32
3	Kolar	67043	173893	12	48
4	Tumkur	82075	233526	14	56
5	Chitradurga	53985	164596	7	28
6	Davanagere	38067	92644	7	28
7	Shimoga	110130	275915	8	32

1	2	3	4	5	6
8	Mysore	27390	56273	7	28
9	Ch.Nagar	9055	21855	4	16
10	Mandya	60467	111407	8	32
11	Hassan	68530	38757	12	48
12	Chickmagalur	63763	183231	11	44
13	Kodagu	9403	24753	3	12
14	D. Kannada	88501	19473	9	36
15	Udupi	54213	93300	5	20
16	Belgaum	3652	11918	11	44
17	Bijapur	2884	12961	4	16
18	Bagalkot	288	1174	6	24
19	Dharwad	1486	6522	4	16
20	Haveri	9506	138803	7	28
21	Gadag	1865	7295	4	16
22	U. Kannada	15761	22862	11	44
23	Gulbarga	11750	40818	9	36
24	Bellary	4380	6280	7	28
25	Bidar	5292	19471	4	16
26	Raichur	5163	15545	5	20
27	Koppal	7259	22246	4	16
	Total	**884198**	**2147105**	**194**	**776**

ಸೋಮವಾರ ಪೇಟೆ, ಮಡಿಕೇರಿ ರಾಜ್ಯ ಹೆದ್ದಾರಿಯಲ್ಲಿ ಬರುವ ಸೇತುವೆ ಕಾಮಗಾರಿಗಳ ಅನುಷ್ಠಾನ

804 (1527) - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಸೋಮವಾರಪೇಟೆ, ವಡಕೇರಿ ರಾಜ್ಯ ಹೆದ್ದಾರಿಯಲ್ಲಿ ಬರುವ ಮಾದಪುರ ಹಾಗೂ ಹಟ್ಟಿಹೊಳೆ ಸೇತುವೆಗಳ ಕಾಮಗಾರಿ ಯಾವ ಹಂತದಲ್ಲಿದೆ;

ಆ. ಈ ಕಾಮಗಾರಿಗಳನ್ನು ಸ್ಥಗಿತಗೊಳಿಸಿರುವ ವಿಚಾರ ನಿಜವೇ; ಹಾಗಿದ್ದಲ್ಲಿ ಏತಕ್ಕಾಗಿ ಸ್ಥಗಿತಗೊಳಿಸಾಲಗಿದೆ;

ಇ. ಸೇತುವೆ ಕಾಮಗಾರಿಯನ್ನು ಎಂದು ಪುನರ್ ಆರಂಭಿಸಲಾಗುವುದು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು;

ಈ. ಸೋಮವಾರಪೇಟೆ-ಸುಬ್ರಮಣ್ಯದ ರಾಜ್ಯ ಹೆದ್ದಾರಿ ನಿರ್ಮಾಣಕ್ಕೆ ಮಂಜೂರಾಗಿರುವ ಹಣ ಎಷ್ಟು; ಯಾವಾಗ ಈ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತದೆ?